**ಚೆಕ್ಕುಗಳು ಪಾವತಿಗೆ ಅಂಗೀಕೃತವಾಗದಿರುವುದು– ಅದರ ಪ್ರಕ್ರಿಯೆ**

ಉಲ್ಲೇಖ: ಡಿಬಿಓಡಿ.ಬಿಸಿ.ಎಲ್ಇಜಿ.ಸಂಖ್ಯೆ.113/09.12.001/2002–03 ಜೂನ್ 26, 2003

ಎಲ್ಲ ಅನುಸೂಚಿತ ವಾಣಿಜ್ಯ ಬ್ಯಾಂಕುಗಳಿಗೆ
(ಆರ್ಆರ್‌ಬಿಗಳು ಮತ್ತು ಎಲ್ಎಬಿಗಳನ್ನು ಹೊರತುಪಡಿಸಿ)

ಮಾನ್ಯರೇ

**ಚೆಕ್ಕುಗಳು ಪಾವತಿಗೆ ಅಂಗೀಕೃತವಾಗದಿರುವುದು–ಅದರ ಪ್ರಕ್ರಿಯೆ**

ಪಾವತಿಗೆ ಅಂಗೀಕೃತವಾಗದ ಸಂಲೇಖಗಳನ್ನು (ಇನ್‌ಸ್ಟ್ರುಮೆಂಟ್ಸ್) ಯಾವುದೇ ಕಾರಣದಿಂದ 24 ಗಂಟೆಗಳಿಗಿಂತಲೂ ಹೆಚ್ಚು ತಡವಾಗದಂತೆ ಗ್ರಾಹಕನಿಗೆ ಕೂಡಲೇ ಹಿಂದಿರುಗಿಸಬೇಕೆಂದು/ರವಾನಿಸಬೇಕೆಂದು ಗೋಯಿಪೋರಿಯಾ ಸಮಿತಿ ಮಾಡಿರುವ ಶಿಫಾರಸುಗಳನ್ನು ಅನುಷ್ಠಾನಗೊಳಿಸುವಂತೆ 1992ರ ಜನವರಿಯಲ್ಲಿ ಬ್ಯಾಂಕುಗಳಿಗೆ ಸಲಹೆ ನೀಡಿದ್ದ ವಿಷಯ ನಿಮಗೆ ತಿಳಿದೇ ಇದೆ. (ಉಲ್ಲೇಖ ಸಂಖ್ಯೆ. 3.36 ನಮ್ಮ ಸುತ್ತೋಲೆ ಡಿಬಿಓಡಿ ಸಂಖ್ಯೆ ಬಿಸಿ.74/09.07.001/91–92 ದಿನಾಂಕ 28ನೇ ಜನವರಿ 1992).

2. ಸ್ಟಾಕ್ ಮಾರ್ಕೆಟ್ ಹಗರಣದ ಬಗ್ಗೆ ಜಂಟಿ ಸಂಸದೀಯ ಸಮಿತಿಯು (ಜೆಪಿಸಿ) ನಡೆಸಿದ ತನಿಖೆಗೆ ಅನುಸಾರವಾಗಿ "ಸ್ಟಾಕ್ ಎಕ್ಸ್‌ಚೇಂಜ್‌ಗಳಿಂದ ಚೆಕ್ಕುಗಳು ಪಾವತಿಗೆ ಅಂಗೀಕೃತವಾಗದೆ ಹಿಂದಕ್ಕೆ ಬರುವ ಸಂಬಂಧದಲ್ಲಿ ಬ್ಯಾಂಕುಗಳು ಅನುಸರಿಸಬೇಕಾದ ಕಾರ್ಯವಿಧಾನ ಕುರಿತು ಎಲ್ಲ ಬ್ಯಾಂಕುಗಳಿಗೆ ರಿಸರ್ವ್ ಬ್ಯಾಂಕು ನಿರ್ದಿಷ್ಟ ಮಾರ್ಗಸೂಚಿಗಳನ್ನು ನೀಡಬೇಕಾಗಿದೆ" ಎಂದು ಜೆಪಿಸಿ ಶಿಫಾರಸುಗಳನ್ನು ಮಾಡಿದೆ (ಅದರ ವರದಿಯ ಪ್ಯಾರಾ 5.214ರಲ್ಲಿ) ಜೆಪಿಸಿ ಮಾಡಿರುವ ಮೇಲೆ ತಿಳಿಸಿದ ಶಿಫಾರಸಿನ ಹಿನ್ನೆಲೆಯಲ್ಲಿ ಪಾವತಿಗೆ ಅಂಗೀಕೃತವಾಗದೆ ಹಿಂದಕ್ಕೆ ಬಂದ ಎಲ್ಲ ಚೆಕ್ಕುಗಳಿಗೆ ಸಂಬಂಧಿಸಿದಂತೆ ಚಾಲ್ತಿಯಲ್ಲಿರುವ ಸೂಚನೆಗಳನ್ನು ಪುನರವಲೋಕಿಸಲಾಗಿದೆ.

3. ಪಾವತಿಗೆ ಅಂಗೀಕೃತವಾಗದ ಚೆಕ್ಕುಗಳ ಬಗ್ಗೆ ವ್ಯವಹರಿಸಲು ಮೇಲ್ಕಂಡ ಸೂಚನೆಗಳನ್ನು ಗಮನದಲ್ಲಿಟ್ಟುಕೊಂಡು ಬ್ಯಾಂಕುಗಳು ಈಗಾಗಲೇ ಸೂಕ್ತ ಪ್ರಕ್ರಿಯೆಯನ್ನು ಪಾಲಿಸುತ್ತಿವೆ ಎಂಬುದು ನಮಗೆ ಮನವರಿಕೆಯಾಗಿದೆ. ಆದಾಗ್ಯೂ, ಈ ಸಂಬಂಧದಲ್ಲಿ ಎಲ್ಲ ಬ್ಯಾಂಕುಗಳು ಅನುಸರಿಸುತ್ತಿರುವ ಪ್ರಕ್ರಿಯೆಯನ್ನು ಏಕರೂಪಗೊಳಿಸುವುದು ಅಗತ್ಯವೆಂದು ಪರಿಗಣಿಸಲಾಗಿದೆ. ಆದ್ದರಿಂದ ಹಣ ಇಲ್ಲದಿರುವ ಕಾರಣದಿಂದಾಗಿ ಪಾವತಿಗೆ ಅಂಗೀಕೃತವಾಗದ ಸಂಲೇಖಗಳ ಸಂಬಂಧದಲ್ಲಿ ಹಾಲಿ ಇರುವ ಸೂಚನೆಯ ಜೊತೆಗೆ ಸಾಕಷ್ಟು ಹಣ ಇಲ್ಲದಿರುವ ಕಾರಣದಿಂದಾಗಿ ಪಾವತಿಗೆ ಅಂಗೀಕೃತವಾಗದ ಎಲ್ಲ ಚೆಕ್ಕುಗಳನ್ನು ಒಳಗೊಳ್ಳುವಂಥ ಮತ್ತು ಸ್ಟಾಕ್ಎಕ್ಸ್‌ಚೇಂಜ್‌ಗಳ ವ್ಯವಹಾರಗಳ ಇತ್ಯರ್ಥಗಳಿಗೆ ಸಂಬಂಧಿಸಿದಂಥವುಗಳನ್ನು ಮಾತ್ರವೇ ಒಳಗೊಳ್ಳದ ಈ ಸುತ್ತೋಲೆಯ 4ನೇ ಪ್ಯಾರಾದಲ್ಲಿ ನಿರೂಪಿಸಿರುವ ಹೆಚ್ಚುವರಿ ಸೂಚನೆಗಳನ್ನು ಬ್ಯಾಂಕುಗಳು ಪಾಲಿಸಬೇಕು ಎಂದು ಸೂಚಿಸಲಾಗಿದೆ.

4. **ಅ. ಚೆಕ್ಕುಗಳನ್ನು ಹಿಂದಿರುಗಿಸುವ/ರವಾನಿಸುವ ಪ್ರಕ್ರಿಯೆ.**

(i) ಹಣ ಸಂದಾಯ ಮಾಡುವ ಬ್ಯಾಂಕು ತೀರುವೆ ಕೇಂದ್ರಗಳ ಮೂಲಕ ಸಲ್ಲಿಸಿದ ಪಾವತಿಗೆ ಅಂಗೀಕೃತವಾಗದ ಚೆಕ್ಕುಗಳನ್ನು, ಬ್ಯಾಂಕರುಗಳ ತೀರುವೆ ಕೇಂದ್ರಗಳಿಗೆ ಏಕರೂಪದ ನಿಯಂತ್ರಣಗಳು ಮತ್ತು ನಿಯಮಗಳ ಅನ್ವಯ ಸಂಬಂಧಪಟ್ಟ ಆಯಾ ತೀರುವೆ ಕೇಂದ್ರಕ್ಕೆ ನಿರ್ದಿಷ್ಟಪಡಿಸಿದ ರೀತಿಯ ಪ್ರಕಾರ ಕಟ್ಟುನಿಟ್ಟಾಗಿ ಹಿಂದಿರುಗಿಸತಕ್ಕದ್ದು. ಹಣ ಸಂಗ್ರಹಿಸುವ ಬ್ಯಾಂಕು, ಪಾವತಿಗೆ ಅಂಗೀಕೃತವಾಗದೆ ವಾಪಸಾದ ಚೆಕ್ಕುಗಳನ್ನು ಸ್ವೀಕರಿಸಿದ ನಂತರ ಅವುಗಳನ್ನು ಹಣ ಪಾವತಿ ಪಡೆಯುವವರಿಗೆ/ಧಾರಕರಿಗೆ ರವಾನಿಸತಕ್ಕದ್ದು.

(ು) ಹಣ ಸಂದಾಯ ಮಾಡುವ ಬ್ಯಾಂಕಿನಲ್ಲಿರುವ ಎರಡು ಖಾತೆಗಳ ನಡುವೆ ವರ್ಗಾವಣೆಯ ಮೂಲಕ ವ್ಯವಹಾರವನ್ನು ಮುಗಿಸುವುದಕ್ಕಾಗಿ ಆ ಬ್ಯಾಂಕಿಗೆ ನೇರವಾಗಿ ಸಲ್ಲಿಸಿದ ಚೆಕ್ಕುಗಳ ಸಂಬಂಧದಲ್ಲಿ, ಆ ಬ್ಯಾಂಕು ಪಾವತಿಗೆ ಅಂಗೀಕೃತವಾಗದ ಚೆಕ್ಕುಗಳನ್ನು ಹಣ ಪಾವತಿ ಪಡೆಯುವವರಿಗೆ /ಧಾರಕರಿಗೆ ಕೂಡಲೇ ಹಿಂದಿರುಗಿಸತಕ್ಕದ್ದು.

(ೂ) ಎಲ್ಲ ಖಾತೆಗಳ ಸಂಬಂಧದಲ್ಲಿ ಹಣ ಇಲ್ಲದ ಕಾರಣದಿಂದಾಗಿ ಪಾವತಿಗೆ ಅಂಗೀಕೃತವಾಗದ ಚೆಕ್ಕುಗಳನ್ನು ಮೆಮೋದೊಂದಿಗೆ, ಆ ಮೆಮೋದಲ್ಲಿ "ಸಾಕಷ್ಟು ಹಣವಿಲ್ಲ" ಎಂಬುದಾಗಿ ಪಾವತಿಗೆ ಅಂಗೀಕಾರವಾಗದಿರುವುದಕ್ಕೆ ಕಾರಣವನ್ನು ಸೂಚಿಸಿ ಹಿಂದಿರುಗಿಸತಕ್ಕದ್ದು.

**4. ಖಖ. ಪಾವತಿಗೆ ಅಂಗೀಕೃತವಾಗದ ಚೆಕ್ಕುಗಳ ಬಗ್ಗೆ ಮಾಹಿತಿ**

(ು) 1 ಕೋಟಿ ರೂಪಾಯಿ ಮತ್ತು ಅದಕ್ಕೂ ಹೆಚ್ಚಿನ ಮೊತ್ತದ ಪಾವತಿಗೆ ಅಂಗೀಕೃತವಾಗದ ಪ್ರತಿಯೊಂದು ಚೆಕ್‌ಗೆ ಸಂಬಂಧಿಸಿದ ಮಾಹಿತಿಯನ್ನು ಘಟಕಗಳಲ್ಲಿನ ಬ್ಯಾಂಕ್‌ನ ಎಂಐಎಸ್‌ನ ಒಂದು ಭಾಗವಾಗಿ ದಾಖಲಿಸಿಡತಕ್ಕದ್ದು ಮತ್ತು ಸಂಬಂಧಪಟ್ಟ ಶಾಖೆಗಳು ಅಂಥ ಮಾಹಿತಿಯನ್ನು ತಮ್ಮ ನಿಯಂತ್ರಣ ಕಚೇರಿಗೆ/ಕೇಂದ್ರ ಕಚೇರಿಗೆ ವರದಿ ಮಾಡತಕ್ಕದ್ದು.

(ು) ಸ್ಟಾಕ್ ಎಕ್ಸ್‌ಚೇಂಜ್‌ಗಳ ಹೆಸರಿಗೆ ನೀಡಿದ ಮತ್ತು ಪಾವತಿಗೆ ಅಂಗೀಕೃತವಾಗದ ಚೆಕ್ಕುಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಬ್ಯಾಂಕುಗಳು ದಳ್ಳಾಳಿ ಸಂಸ್ಥೆಗಳಿಗೆ ಸಂಬಂಧಿಸಿದಂತೆ ತಮ್ಮ ಎಂಐಎಸ್‌ನ ಭಾಗವಾಗಿ ಅಂಥ ಚೆಕ್ಕುಗಳ ಮೌಲ್ಯ ಎಷ್ಟೇ ಆಗಲಿ ಅದನ್ನು ಗಣನೆಗೆ ತೆಗೆದುಕೊಳ್ಳದೆ ಆ ಚೆಕ್ಕುಗಳನ್ನು ಪ್ರತ್ಯೇಕವಾಗಿ ಕ್ರೋಢೀಕರಿಸಿ ತಮ್ಮ ತಮ್ಮ ಮುಖ್ಯ ಕಚೇರಿಗೆ/ಕೇಂದ್ರ ಕಚೇರಿಗೆ ವರದಿ ಮಾಡತಕ್ಕದ್ದು.

**4. ಖಖಖ. ಚೆಕ್ಕುಗಳು ಪದೇ ಪದೇ ಪಾವತಿಗೆ ಅಂಗೀಕೃತವಾಗದ ಪ್ರಕರಣಗಳ ಬಗ್ಗೆ ವ್ಯವಹರಿಸುವುದು.**

(ು) ಗ್ರಾಹಕರಲ್ಲಿ ಹಣಕಾಸು ಶಿಸ್ತನ್ನು ತರುವ ದೃಷ್ಟಿಯಿಂದ, ಚೆಕ್ ಸೌಲಭ್ಯ ಇರುವ ಖಾತೆಗಳ ಕಾರ್ಯಾಚರಣೆಗೆ ಸಂಬಂಧಿಸಿದಂತೆ, ಬ್ಯಾಂಕುಗಳು, ಚೆಕ್ ನೀಡುವವನ ಒಂದು ನಿರ್ದಿಷ್ಟ ಖಾತೆಗೆ ನೀಡಿದ ಒಂದು ಕೋಟಿ ರೂಪಾಯಿ ಮತ್ತು ಅದಕ್ಕೂ ಹೆಚ್ಚಿನ (ಮೊತ್ತದ) ಮೌಲ್ಯದ ಚೆಕ್ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂಬ ಕಾರಣದ ಮೇಲೆ, ಒಂದು ಹಣಕಾಸು ವರ್ಷದಲ್ಲಿ ನಾಲ್ಕು ಸಂದರ್ಭಗಳಲ್ಲಿ ಪಾವತಿಗೆ ಅಂಗೀಕೃತವಾಗದ ಪಕ್ಷದಲ್ಲಿ, ಹೊಸ ಚೆಕ್ ಬುಕ್ಕನ್ನು ನೀಡಲಾಗುವುದಿಲ್ಲ ಎಂಬ ಷರತ್ತೊಂದನ್ನು ಜಾರಿಗೆ ತರತಕ್ಕದ್ದು. ಜತೆಗೆ, ಬ್ಯಾಂಕು ಇಚ್ಛಿಸಿದಲ್ಲಿ ಚಾಲ್ತಿ ಖಾತೆಯನ್ನು ಮುಚ್ಚುವುದನ್ನು ಸಹ ಪರಿಗಣಿಸಬಹುದು. ಆದರೆ, ನಗದು ಸಾಲ ಖಾತೆ, ಓವರ್ ಡ್ರಾಫ್ಟ್ ಖಾತೆಯಂತಹ ಸಾಲಗಳ ಖಾತೆಗಳ ಸಂಬಂಧದಲ್ಲಿ ಈ ಸಾಲ ಸೌಲಭ್ಯಗಳನ್ನು ಮತ್ತು ಚೆಕ್ ಸೌಲಭ್ಯವನ್ನು ಈ ಖಾತೆಗಳಿಗೆ ಸಂಬಂಧಿಸಿದಂತೆ ಮುಂದುವರೆಸುವ ಅಥವಾ ಮುಂದುವರೆಸದಿರುವ ಅಗತ್ಯವನ್ನು ಮಂಜೂರು ಮಾಡುವ ಪ್ರಾಧಿಕಾರಿಗಿಂತ ಮೇಲಿನ ಸಮುಚಿತ ಪ್ರಾಧಿಕಾರಿಯು ಪುನರ್ ಪರಿಶೀಲಿಸತಕ್ಕದ್ದು.

(ು) ಹಾಲಿ ಇರುವ ಖಾತೆಗಳ ಕಾರ್ಯನಿರ್ವಹಣೆಗೆ ಸಂಬಂಧಿಸಿದಂತೆ ಮೇಲೆ (ು) ರಲ್ಲಿ ತಿಳಿಸಿದ ಷರತ್ತನ್ನು ಜಾರಿಗೊಳಿಸುವ ಉದ್ದೇಶಕ್ಕಾಗಿ ಬ್ಯಾಂಕುಗಳು, ಹೊಸ ಚೆಕ್ ಬುಕ್ಕನ್ನು ನೀಡುವ ಸಮಯದಲ್ಲಿ, ಹೊಸ ಷರತ್ತನ್ನು ಗಿರಾಕಿಗಳಿಗೆ ತಿಳಿಸುವ ಒಂದು ಪತ್ರವನ್ನು ನೀಡತಕ್ಕದ್ದು.

(ೂ) ಒಂದು ಹಣಕಾಸು ವರ್ಷದಲ್ಲಿ ಖಾತಾದಾರನ ಒಂದು ನಿರ್ದಿಷ್ಟ ಖಾತೆಯಲ್ಲಿ ಒಂದು ಚೆಕ್ಕು ಮೂರು ಬಾರಿ ಪಾವತಿಗೆ ಅಂಗೀಕೃತವಾಗದಿದ್ದರೆ, ಬ್ಯಾಂಕು ಮೇಲೆ ತಿಳಿಸಿದ ಷರತ್ತಿನ ಕಡೆಗೆ ಮತ್ತು ಹಣಕಾಸು ವರ್ಷದಲ್ಲಿ ಅದೇ ಖಾತೆಯಲ್ಲಿ ನಾಲ್ಕನೆಯ ಬಾರಿಗೆ ಚೆಕ್ ಪಾವತಿಗೆ ಅಂಗೀಕೃತವಾಗದ ಪಕ್ಷದಲ್ಲಿ ಚೆಕ್ ಸೌಲಭ್ಯವನ್ನು ನಿಲ್ಲಿಸುವ ಬಗ್ಗೆ ಸಂಬಂಧಪಟ್ಟ ಗ್ರಾಹಕನ

ಗಮನವನ್ನು ಸೆಳೆದು ಆತನಿಗೆ ಒಂದು ಎಚ್ಚರಿಕೆಯ ಸೂಚನೆಯನ್ನು ನೀಡತಕ್ಕದ್ದು. ಬ್ಯಾಂಕು ಖಾತೆಯನ್ನು ಮುಚ್ಚಲು ಉದ್ದೇಶಿಸಿದಲ್ಲಿ ಅದೇ ರೀತಿಯ ಎಚ್ಚರಿಕೆಯ ಸೂಚನೆಯನ್ನು ನೀಡತಕ್ಕದ್ದು.

**4. ಖಗಿ. ಸಾಮಾನ್ಯ**

(೨) ಪಾವತಿಗೆ ಅಂಗೀಕೃತವಾಗದ ಚೆಕ್‌ಗೆ ಸಂಬಂಧಿಸಿದ ವ್ಯವಹರಣೆಯಲ್ಲಿ ಒಂದು ನ್ಯಾಯಾಲಯ, ಗ್ರಾಹಕ ವೇದಿಕೆ ಅಥವಾ ಯಾವುದೇ ಇತರ ಸಕ್ಷಮ ಪ್ರಾಧಿಕಾರದ ಮುಂದೆ ದೂರುದಾರನ (ಅಂದರೆ, ಸಂದಾಯ ಪಡೆಯುವವನು/ಪಾವತಿಗೆ ಅಂಗೀಕೃತವಾಗದ ಚೆಕ್‌ನ ಧಾರಕನು) ಪರವಾಗಿ ಚೆಕ್ ಪಾವತಿಗೆ ಅಂಗೀಕೃತವಾಗದ ಸಂಗತಿಯನ್ನು ರುಜುವಾತು ಪಡಿಸಲು ಸಾಕ್ಷ್ಯ ನೀಡುವ ಉದ್ದೇಶಕ್ಕಾಗಿ ಬ್ಯಾಂಕುಗಳು ಪೂರ್ಣ ಸಹಕಾರ ನೀಡತಕ್ಕದ್ದು ಮತ್ತು ಚೆಕ್‌ಗಳು ಪಾವತಿಗೆ ಅಂಗೀಕೃತವಾಗದ ಸಂಗತಿಯ ದಸ್ತಾವೇಜು ಪುರಾವೆಯನ್ನು ಆತನಿಗೆ/ಆಕೆಗೆ ಒದಗಿಸತಕ್ಕದ್ದು.

(೩) 2003–04ರ ಮೊದಲ ತ್ರೈಮಾಸಿಕದಿಂದ ಅಂದರೆ ಜೂನ್ 2003ಕ್ಕೆ ಕೊನೆಗೊಳ್ಳುವ ತ್ರೈಮಾಸಿಕದಿಂದ ಪ್ರಾರಂಭಿಸಿ ಬ್ಯಾಂಕುಗಳು, ಪ್ರತಿ ತ್ರೈಮಾಸಿಕ, ಮೇಲೆ ಖಖ ರಲ್ಲಿ ತಿಳಿಸಿದ ವಿಷಯಗಳಿಗೆ ಸಂಬಂಧಿಸಿದ ಕ್ರೋಢೀಕೃತ ಮಾಹಿತಿಯನ್ನು ತಮ್ಮ ಲೆಕ್ಕಪರಿಶೋಧನೆ/ಆಡಳಿತ ಸಮಿತಿ ಮುಂದೆ ಮಂಡಿಸತಕ್ಕದ್ದು.

5. ಚೆಕ್ ಪಾವತಿಗೆ ಅಂಗೀಕೃತವಾಗದ ಸಂಗತಿಯನ್ನು ಸಂದಾಯ ಪಡೆಯುವವನಿಗೆ/ಧಾರಕನಿಗೆ ತಿಳಿಸುವುದಕ್ಕೆ ತಡಮಾಡಲು ಅಥವಾ ಅದನ್ನು ತಡೆಹಿಡಿಯಲು ಅಥವಾ ಹಾಗೆ ಪಾವತಿಗೆ ಅಂಗೀಕೃತವಾಗದ ಚೆಕ್ ಅನ್ನು ಹಿಂದಿರುಗಿಸುವುದಕ್ಕೆ ತಡ ಮಾಡಲು ಅಥವಾ ಅದನ್ನು ತಡೆಹಿಡಿಯಲು ಚೆಕ್ ನೀಡುವವರೊಂದಿಗೆ ಬ್ಯಾಂಕ್ ಸಿಬ್ಬಂದಿ ಅಥವಾ ಇತರ ವ್ಯಕ್ತಿಯು ಷಾಮೀಲಾಗುವುದಕ್ಕೆ ಇರಬಹುದಾದ ಅವಕಾಶವನ್ನು ತಡೆಯಲು ಅಂತರ್ಗತ ಪ್ರತಿಬಂಧ ಕ್ರಮಗಳು ಮತ್ತು ಪ್ರಕ್ರಿಯೆಯೊಂದಿಗೆ ಅಂಗೀಕೃತವಾಗದ ಚೆಕ್‌ಗಳ ಬಗ್ಗೆ ವ್ಯವಹರಿಸಲು ಬ್ಯಾಂಕುಗಳು ತಮ್ಮ ತಮ್ಮ ಮಂಡಳಿಗಳ ಅನುಮೋದನೆ ಪಡೆದು ಸೂಕ್ತ ಕಾರ್ಯವಿಧಾನವನ್ನು ಅಳವಡಿಸಿಕೊಳ್ಳುವಂತೆ ಅವುಗಳಿಗೆ ಸಲಹೆ ಮಾಡಲಾಗಿದೆ. ಬ್ಯಾಂಕುಗಳು ತಮ್ಮ ಅಧಿಕಾರಿಗಳಿಗೆ ಮತ್ತು ಸಿಬ್ಬಂದಿಗೆ ಅಗತ್ಯ ಆಂತರಿಕ ಮಾರ್ಗಸೂಚಿಗಳನ್ನು ಸಹಾ ನಿರೂಪಿಸಿತಕ್ಕದ್ದು ಹಾಗೂ ಅಂಥ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸೂಚಿಸತಕ್ಕದ್ದು ಹಾಗೂ ಸಂದಾಯ ಪಡೆಯುವವನಿಗೆ ಪಾವತಿಗೆ ಅಂಗೀಕೃತವಾಗದ ಚೆಕ್‌ನ ಬಗ್ಗೆ ಪರಿಣಾಮಕಾರಿಯಾಗಿ ತಿಳಿಸುವ ಮತ್ತು ಆ ಚೆಕ್ಕನ್ನು ಆತನಿಗೆ ಬಟವಾಡೆ ಮಾಡುವ ಮೇಲೆ ತಿಳಿಸಿದ ಉದ್ದೇಶವನ್ನು ಸಾಧಿಸಲು ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ನೋಡಿಕೊಳ್ಳತಕ್ಕದ್ದು.

6. ದಯವಿಟ್ಟು ಸ್ವೀಕೃತಿ ನೀಡಿ.

ಸಹಿ/–

**(ಸಿ.ಆರ್. ಮುರಳೀಧರನ್)**
ಮುಖ್ಯ ಪ್ರಧಾನ ವ್ಯವಸ್ಥಾಪಕ.

51194

**ಚಾಲ್ತಿ ಖಾತೆ ವ್ಯವಹಾರಗಳು–ಉದಾರೀಕರಣ**
**ಎ.ಪಿ. (ಡಿಐಆರ್ ಶ್ರೇಣಿ) ಸುತ್ತೋಲೆ ಸಂಖ್ಯೆ 3 (ಜುಲೈ 17, 2003)**
**ಭಾರತೀಯ ರಿಸರ್ವ್ ಬ್ಯಾಂಕು**
**ವಿದೇಶೀ ವಿನಿಮಯ ನಿಯಂತ್ರಣ ಇಲಾಖೆ**
**ಕೇಂದ್ರ ಕಚೇರಿ**
**ಮುಂಬೈ–400001.**

ಎ.ಪಿ. (ಡಿಐಆರ್ ಶ್ರೇಣಿ) ಸುತ್ತೋಲೆ ಸಂಖ್ಯೆ 3 ಜುಲೈ 17, 2003

ಗೆ,

ವಿದೇಶೀ ವಿನಿಮಯ ವ್ಯವಹಾರದಲ್ಲಿ ತೊಡಗಿರುವ ಎಲ್ಲ ಅಧಿಕೃತ ವ್ಯಾಪಾರಿಗಳು.

ಮಾನ್ಯರೇ,

**ಚಾಲ್ತಿ ಖಾತೆ ವ್ಯವಹಾರಗಳು– ಉದಾರೀಕರಣ**

ಕಾಲಕಾಲಕ್ಕೆ ತಿದ್ದುಪಡಿಯಾದ ವಿದೇಶೀ ವಿನಿಮಯ ನಿರ್ವಹಣಾ (ಚಾಲ್ತಿ ಖಾತೆ ವ್ಯವಹಾರಗಳು) ನಿಯಮಗಳು, 2000ದ 5ನೇ ನಿಯಮದ ಖಖಖನೇ ಅನುಸೂಚಿ ಅಡಿಯಲ್ಲಿ ವಿದೇಶೀ ವಿನಿಮಯದ ಬಿಡುಗಡೆಗೆ ಸಂಬಂಧಿಸಿದಂತೆ ಈಗ ಇರುವ ಮಿತಿಗಳ ಕಡೆಗೆ ಅಧಿಕೃತ ವ್ಯಾಪಾರಿಗಳ ಗಮನವನ್ನು ಸೆಳೆಯಲಾಗಿದೆ. ಮತ್ತಷ್ಟು ಉದಾರಗೊಳಿಸುವ ಪ್ರಯತ್ನವಾಗಿ ಈ ಕೆಳಗೆ ವಿವರಿಸಿರುವಂತೆ ಈಗ ಇರುವ ಮಿತಿಗಳನ್ನು ಹೆಚ್ಚಿಸಲು ನಿರ್ಧರಿಸಲಾಗಿದೆ.

| ಕ್ರಮ ಸಂಖ್ಯೆ | ಅನುಸೂಚಿ ಖಖಖ ರ ಬಾಬು ಸಂಖ್ಯೆ | ಉದ್ದೇಶ | ಈಗ ಇರುವ ಮಿತಿ (ಅಮೇರಿಕಾ ಡಾಲರ್‌ನಲ್ಲಿ) | ಉದ್ದೇಶಿಸಿರುವ ಮಿತಿ (ಅಮೇರಿಕಾ ಡಾಲರ್‌ನಲ್ಲಿ) |
|---|---|---|---|---|
| 1 | 5 | ವಿದೇಶದಲ್ಲಿ ಉದ್ಯೋಗ | 5,000 | 1,00,000 |
| 2 | 6 | ವಲಸೆ | 5,000 | 1,00,000 |
| 3 | 7 (11) | ವಿದೇಶದಲ್ಲಿರುವ ನಿಕಟ ಸಂಬಂಧಿಗಳ ಜೀವನೋಪಾಯ | 5,000 | 1,00,000 |
| 4 | 10 | ವಿದೇಶದಲ್ಲಿ ವಿದ್ಯಾಭ್ಯಾಸ | 30,000 | 1,00,000 |

2. ಅದರಂತೆ, ಅಧಿಕೃತ ವ್ಯಾಪಾರಿಗಳು, ಯಾವುದೇ ಸಮರ್ಥಿಸುವ ದಾಖಲೆಗಳನ್ನು ಒದಗಿಸುವಂತೆ ಒತ್ತಾಯಿಸದೆ ಆದರೆ ವ್ಯವಹಾರದ ಮೂಲ ವಿವರಗಳನ್ನು ಸೇರಿಸುವ ಸ್ವಯಂಘೋಷಣೆಯ ಮತ್ತು ನಮೂನೆ 2ರಲ್ಲಿ ಅರ್ಜಿಯನ್ನು ಸಲ್ಲಿಸುವುದರ ಆಧಾರದ ಮೇಲೆ ಪ್ರತಿಯೊಂದು ಪ್ರವರ್ಗಕ್ಕೆ ಮೇಲೆ ತಿಳಿಸಿದ ಮಿತಿಗಳವರೆಗೆ ಹಣವನ್ನು ರವಾನೆ ಮಾಡಲು ಅವಕಾಶ ನೀಡಬಹುದು. ಅರ್ಜಿದಾರನು ವಿದೇಶೀ ವಿನಿಮಯವನ್ನು ಖರೀದಿ ಮಾಡಲು ಹಣವನ್ನು ಚೆಕ್ ಅಥವಾ ಡಿಮ್ಯಾಂಡ್ ಡ್ರಾಫ್ಟ್ ರೂಪದಲ್ಲಿ ಅಥವಾ ಆತನ/ಆಕೆಯ ಖಾತೆಗೆ ಖರ್ಚು ಹಾಕುವ ಮೂಲಕ ಸಂದಾಯ ಮಾಡುವಂತೆ ಸಹಾ ಅಧಿಕೃತ ವ್ಯಾಪಾರಿಗಳು ನೋಡಿಕೊಳ್ಳತಕ್ಕದ್ದು.

**ವೈದ್ಯಕೀಯ ಚಿಕಿತ್ಸೆ**

3. ಎ.ಪಿ. (ಡಿಐಆರ್ ಶ್ರೇಣಿ) ಸುತ್ತೋಲೆ ಸಂಖ್ಯೆ 17 ದಿನಾಂಕ ಸೆಪ್ಟೆಂಬರ್ 12, 2002 ರ ಕಡೆಗೆ ಅಧಿಕೃತ ವ್ಯಾಪಾರಿಗಳ ಗಮನವನ್ನು ಸೆಳೆಯಲಾಗಿದೆ. ಅದರನ್ವಯ ವಿದೇಶದಲ್ಲಿ ವೈದ್ಯಕೀಯ ಚಿಕಿತ್ಸೆಗೆ ಆಸ್ಪತ್ರೆಯಿಂದ/ವೈದ್ಯರಿಂದ ಯಾವುದೇ ಅಂದಾಜನ್ನು ಪಡೆದು ನೀಡುವಂತೆ ಒತ್ತಾಯಿಸದೆ 50,000 ಅಮೇರಿಕಾ ಡಾಲರ್ ಅಥವಾ ಅದಕ್ಕೆ ಸಮಾನವಾದ ಮೊತ್ತದವರೆಗೆ ವಿದೇಶೀ ವಿನಿಮಯವನ್ನು ಬಿಡುಗಡೆ ಮಾಡಬಹುದು. ಇನ್ನು ಮುಂದೆ, ಅಧಿಕೃತ ವ್ಯಾಪಾರಿಗಳೂ ವಿದೇಶದಲ್ಲಿನ/ಭಾರತದಲ್ಲಿನ ಆಸ್ಪತ್ರೆಯಿಂದ/ವೈದ್ಯರಿಂದ ಯಾವುದೇ ಅಂದಾಜನ್ನು ಒತ್ತಾಯಿಸದೆ ವಿದೇಶದಲ್ಲಿ ವೈದ್ಯಕೀಯ ಚಿಕಿತ್ಸೆಗಾಗಿ ನಿವಾಸಿ ಭಾರತೀಯರಿಗೆ 100,000 ಅಮೇರಿಕಾ ಡಾಲರ್ ಅಥವಾ ಅದಕ್ಕೆ ಸಮಾನವಾದ ಮೊತ್ತದವರೆಗೆ ವಿದೇಶೀ ವಿನಿಮಯವನ್ನು ಬಿಡುಗಡೆ ಮಾಡಬಹುದೆಂದು ನಿರ್ಧರಿಸಲಾಗಿದೆ. ಅದರ 3ನೇ ಪ್ಯಾರಾದಲ್ಲಿ ತಿಳಿಸಿರುವ ಇತರ ಷರತ್ತುಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

**ಸಮಾಲೋಚನಾ ಸೇವೆಗಳು**

4. ಅಲ್ಲದೆ, ಭಾರತದ ಹೊರಗಿನಿಂದ ಪಡೆದ ಸಮಾಲೋಚನಾ ಸೇವೆಗಳಿಗಾಗಿ ರವಾನೆ ಮಾಡುವುದಕ್ಕೆ ಇರುವ ಮಿತಿಯನ್ನು ಈಗ ಇರುವ ಅದೇ ಅನುಸೂಚಿ–111ರ 15ನೇ ಬಾಬಿನಲ್ಲಿ ಗೊತ್ತುಪಡಿಸಿರುವಂಥ 100,000 ಅಮೇರಿಕಾ ಡಾಲರ್ ಮಿತಿಗೆ ಪ್ರತಿಯಾಗಿ ಪ್ರತಿಯೋಜನೆಗೆ 1 ದಶಲಕ್ಷ ಅಮೇರಿಕಾ ಡಾಲರ್‌ಗೆ ಹೆಚ್ಚಿಸಲು ಸಹಾ ನಿರ್ಧರಿಸಲಾಗಿದೆ. ಅಧಿಕೃತ ವ್ಯಾಪಾರಿಗಳು, ಅರ್ಜಿದಾರನು ತಮಗೆ ತೃಪ್ತಿಯಾಗುವಂತೆ ದಸ್ತಾವೇಜುಗಳನ್ನು ಸಲ್ಲಿಸುವುದಕ್ಕೆ ಒಳಪಟ್ಟು 1 ದಶ ಲಕ್ಷ ಅಮೇರಿಕಾ ಡಾಲರ್‌ವರೆಗೆ ಹಣವನ್ನು ರವಾನೆ ಮಾಡಲು ಅವಕಾಶ ನೀಡಬಹುದು.

5. ವಿದೇಶೀ ವಿನಿಮಯ ನಿರ್ವಹಣೆ (ಚಾಲ್ತಿ ಖಾತೆ ವ್ಯವಹಾರಗಳು) ನಿಯಮಗಳು, 2000 ಕ್ಕೆ ಅಗತ್ಯ ತಿದ್ದುಪಡಿಗಳನ್ನು ಪ್ರತ್ಯೇಕವಾಗಿ ಅಧಿಸೂಚಿಸಲಾಗುತ್ತಿದೆ.

6. ಅಧಿಕೃತ ವ್ಯಾಪಾರಿಗಳು ಸುತ್ತೋಲೆಯಲ್ಲಿರುವ ಅಂಶಗಳನ್ನು ತಮ್ಮ ಸಂಬಂಧಪಟ್ಟ ಘಟಕಗಳ ಗಮನಕ್ಕೆ ತರತಕ್ಕದ್ದು.

7. ಈ ಸುತ್ತೋಲೆಯಲ್ಲಿ ಒಳಗೊಂಡಿರುವ ನಿರ್ದೇಶನಗಳನ್ನು ವಿದೇಶೀ ವಿನಿಮಯ ನಿರ್ವಹಣೆ ಅಧಿನಿಯಮ, 1999 ರ (1999 ರ 42) ಪ್ರಕರಣ 10(4) ಮತ್ತು ಪ್ರಕರಣ 11(1)ರ ಅಡಿಯಲ್ಲಿ ನೀಡಲಾಗಿದೆ.

ತಮ್ಮ ವಿಶ್ವಾಸಿ,

ಗ್ರೇಸ್ ಕೋಶಿ,
ಮುಖ್ಯ ಪ್ರಧಾನ ವ್ಯವಸ್ಥಾಪಕ.